# All India Radio: Bangalore
## National Bulletin In Kannada
**14.07.2026  19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**14.07.2026  19.35 hrs**

**<><><><>**

ಮುಖ್ಯಾಂಶಗಳು

- ಪಶ್ಚಿಮ ಏಷ್ಯಾದಲ್ಲಿನ ವಿದ್ಯಮಾನಗಳ ಮೇಲೆ ಭಾರತ ಸೂಕ್ಷ್ಮ ಗಮನ; ಹಾರ್ಮುಜ್ ಜಲಸಂಧಿಯಲ್ಲಿ ಮುಕ್ತ, ಸುರಕ್ಷಿತ ನೌಕಾಯಾನಕ್ಕೆ ಕರೆ
- ಯುವಜನತೆಯ ಕೌಶಲ್ಯ ಹೆಚ್ಚಿಸುವಲ್ಲಿ ಕೃತಕ ಬುದ್ಧಿಮತ್ತೆ ಪ್ರಮುಖ ಪಾತ್ರ : ಕೇಂದ್ರ ಸಚಿವ ಡಾ.ಮನ್ಸುಖ್ ಮಾಂಡವೀಯ ಅಭಿಮತ
- ಭಾರತ-ಯುಕೆ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ ನಾಳೆಯಿಂದ ಜಾರಿ: ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್
- ಫಿಫಾ ವಿಶ್ವಕಪ್ ಫುಟ್ಬಾಲ್ ; ಮೊದಲನೇ ಸೆಮಿಫೈನಲ್‌ನಲ್ಲಿಂದು ಫ್ರಾನ್ಸ್-ಸ್ಪೇನ್ ಮುಖಾಮುಖಿ
- ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್ ಸರಣಿ ; ಮೊದಲನೇ ಪಂದ್ಯದಲ್ಲಿ ಭಾರತಕ್ಕೆ ೨೫೯ ರನ್‌ಗಳ ಗುರಿ ನೀಡಿದ ಇಂಗ್ಲೆಂಡ್

<><><><>

ಪಶ್ಚಿಮ ಏಷ್ಯಾದಲ್ಲಿನ ವಿದ್ಯಾಮಾನಗಳನ್ನು ಭಾರತ ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಹಾರ್ಮುಜ್ ಜಲಸಂಧಿಯಲ್ಲಿ ಮುಕ್ತ, ಸುರಕ್ಷಿತ ನೌಕಾಯಾನ ಮತ್ತು ವಾಣಿಜ್ಯ ಸಂಚಾರಕ್ಕೆ ಕರೆ ನೀಡಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಜಾಗತಿಕ, ಆರ್ಥಿಕತೆ ಮತ್ತು ಇಂಧನ ಭದ್ರತೆ ದೃಷ್ಟಿಯಿಂದ ಈ ಜಲಮಾರ್ಗದ ಸುರಕ್ಷತೆ ಪ್ರಮುಖವಾಗಿದೆ ಎಂದರು. ಪಾಕಿಸ್ತಾನ ಆಕ್ರಮಿತ ಜಮ್ಮು-ಕಾಶ್ಮೀರದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಈ ಪ್ರತಿಭಟನೆಗಳು ಪಾಕಿಸ್ತಾನದ ದಶಕಗಳ ದುರಾಡಳಿತ ಮತ್ತು ಮೂಲಭೂತ ಹಕ್ಕುಗಳ ನಿರಾಕರಣೆಯ ನೇರ ಫಲವಾಗಿದೆ ಎಂದು ತಿಳಿಸಿದರು.

<><><><>

ಹಾರ್ಮುಜ್ ಜಲಸಂಧಿಯ ಮೂಲಕ ಹಾದು ಹೋಗುತ್ತಿದ್ದ ಎಂಟಿ ಅಲ್ ಬಹಿಯಾ ಮತ್ತು ಎಂಟಿ ಮೊಂಬಾಸ ಎಂಬ ಎರಡು ವಾಣಿಜ್ಯ ಹಡಗುಗಳ ಮೇಲೆ ಇಂದು ನಡೆಯಲಿರುವ ದಾಳಿಗೆ ಸಂಬಂಧಿಸಿದಂತೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ. ಈ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿರುವ ಇರಾನ್ ರಾಯಭಾರ ಕಚೇರಿಯ ಉಪಮುಖ್ಯಸ್ಥರನ್ನು ಇಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಕರೆಸಲಾಗಿದ್ದು, ದಾಳಿಯ ವಿರುದ್ಧ ತೀವ್ರ ಪ್ರತಿಭಟನೆ ದಾಖಲಿಸಲಾಗಿದೆ. ದಾಳಿಗೊಳಗಾದ ಎರಡು ಹಡಗುಗಳಲ್ಲಿದ್ದ ೪೬ ಸಿಬ್ಬಂದಿ ಪೈಕಿ ೩೦ ಮಂದಿ ಭಾರತೀಯ ನಾವಿಕರಾಗಿದ್ದಾರೆ. ಈ ಪೈಕಿ ಎಂಟಿ ಅಲ್ ಬಹಿಯಾ ಹಡಗಿನಲ್ಲಿದ್ದ ೧೨ ಭಾರತೀಯರಲ್ಲಿ ಒಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ. ಇನ್ನು ಎಂಟಿ ಮೊಂಬಾಸ ಹಡಗಿನಲ್ಲಿದ್ದ ೧೮ ಭಾರತೀಯರಲ್ಲಿ ೯ ಮಂದಿ ಗಾಯಗೊಂಡಿದ್ದು, ಇವರಲ್ಲಿ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಯುಎಇ ಯಲ್ಲಿರುವ ಭಾರತೀಯ ರಾಯಭಾರ ಕಚೇರಿ, ಬಾಧಿತ ನಾವಿಕರಿಗೆ ಅಗತ್ಯ ನೆರವು ನೀಡಲು ಅಲ್ಲಿನ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುತ್ತಿದೆ. ಪಶ್ಚಿಮ ಏಷ್ಯಾ ವಲಯದಲ್ಲಿ ಮುಕ್ತ ಮತ್ತು ಸುರಕ್ಷಿತ ನೌಕಾಯಾನಕ್ಕೆ ಅಡ್ಡಿಪಡಿಸುವ ಇಂತಹ ಹಿಂಸಾಚಾರವನ್ನು ತಕ್ಷಣವೇ ನಿಲ್ಲಿಸಿ ಶಾಂತಿ ಮತ್ತು ಸ್ಥಿರತೆಗಾಗಿ ರಾಜತಾಂತ್ರಿಕ ಮಾತುಕತೆಗೆ ಮರಳುವಂತೆ ಭಾರತ ಕರೆ ನೀಡಿದೆ.

<><><><>

ಕೃತಕ ಬುದ್ಧಿಮತ್ತೆ ಯುವ ಜನತೆಯ ಕೌಶಲ್ಯವನ್ನು ಪರಿಣಾಮಕಾರಿಯಾಗಿ ಹೆಚ್ಚಿಸಬಲ್ಲದು ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ.ಮನ್ಸುಖ್ ಮಾಂಡವೀಯ ತಿಳಿಸಿದ್ದಾರೆ. ಹೈದರಾಬಾದ್‌ನಲ್ಲಿ ನಡೆದ ಬ್ರಿಕ್ಸ್ ವ್ಯಾಪಾರ ಒಕ್ಕೂಟ ವೇದಿಕೆ ಶೃಂಗಸಭೆಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಜಾರಿಯಲ್ಲಿರುವ ಸರ್ಕಾರದ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳು ಹಾಗೂ ಸ್ಕಿಲ್ ಇಂಡಿಯಾ ಮಿಷನ್ ಅಡಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳ ಕುರಿತು ಮಾಹಿತಿ ಹಂಚಿಕೊಂಡರು. ಪ್ರಸ್ತುತ ದೇಶಾದ್ಯಂತ ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್ ತಂತ್ರಜ್ಞಾನಗಳು ಭಾರಿ ಬದಲಾವಣೆಗಳನ್ನು ತರುತ್ತಿದೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಪ್ರತಿಯೊಬ್ಬರೂ ಜವಾಬ್ದಾರಿಯುತವಾಗಿ ಬಳಸಬೇಕು ಎಂದು ಕರೆ ನೀಡಿದರು. ತಂತ್ರಜ್ಞಾನದ ಬದಲಾವಣೆಯಿಂದ ಉದ್ಯೋಗ ನಷ್ಟವಾಗುವ ಭೀತಿಯಿಂದ ಹೊರಬಂದು ತಮ್ಮ ಕೌಶಲ್ಯಗಳನ್ನು ಕಾರ್ಮಿಕರು ನವೀಕರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇದೇ ವೇಳೆ ಅವರು, ಬ್ರಿಕ್ಸ್ ರಾಷ್ಟ್ರಗಳ ನಡುವಿನ ಪರಸ್ಪರ ಸಹಕಾರ ಎಲ್ಲರ ಜಂಟಿ ಬೆಳವಣಿಗೆಗೆ ಪೂರಕವಾಗಲಿದೆ ಎಂದರು.

<><><><>

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ.ಮನ್ಸುಖ್ ಮಾಂಡವೀಯ ಹೈದರಾಬಾದ್‌ನ ಸನತ್ ನಗರದ ಇಎಸ್‌ಐಸಿ ಆಸ್ಪತ್ರೆಯಲ್ಲಿಂದು ೨೧೧ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಅತ್ಯಾಧುನಿಕ ಹೊರರೋಗಿ ವಿಭಾಗದ ಕಟ್ಟಡವನ್ನು ಉದ್ಘಾಟಿಸಿದರು. ಇದೇ ವೇಳೆ ಅವರು, ದೇಶಾದ್ಯಂತ ೬೫೦ ಕೋಟಿ ರೂಪಾಯಿಗೂ ಅಧಿಕ ವೆಚ್ಚದ ಇತರೆ ೬ ಇಎಸ್‌ಐ ಯೋಜನೆಗಳಿಗೆ ವರ್ಚುವಲ್ ಮೂಲಕ ಚಾಲನೆ ನೀಡಿದರು.

<><><><>

ಭೂಸ್ವಾಧೀನದ ಸಂಪೂರ್ಣ ಪ್ರಕ್ರಿಯೆಯನ್ನು ನಿರ್ವಹಿಸಲು ರೈಲ್ ಭೂಮಿ ಪೋರ್ಟಲ್ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು ಭಾರತೀಯ ರೈಲ್ವೆಯ ಆಧುನೀಕರಣದ ಗುರಿಯೊಂದಿಗೆ ಕೈಗೊಳ್ಳಲಾಗಿರುವ ಸುಧಾರಣೆಗಳ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ನಿರ್ಮಾಣ ವಲಯದಲ್ಲಿ ಸಚಿವಾಲಯ ಹಲವು ಸುಧಾರಣೆಗಳನ್ನು ತಂದಿದೆ ಎಂದರು. ದೇಶದಲ್ಲಿ ರಸಗೊಬ್ಬರಗಳ ಸಾಗಣೆಗೆ ಸಾಂಪ್ರದಾಯಿಕ ಮುಚ್ಚಿದ ವ್ಯಾಗನ್‌ಗಳ ಬದಲಾಗಿ, ಇನ್ಮುಂದೆ ವಿಶೇಷವಾಗಿ ವಿನ್ಯಾಸಗೊಳಿಸಲಾದ ಕಂಟೈನರ್‌ಗಳನ್ನು ಬಳಸಲು ಅನುಮತಿ ನೀಡುವ ಪ್ರಮುಖ ನೀತಿ ಸುಧಾರಣೆಯನ್ನು ಸಚಿವರು ಪ್ರಕಟಿಸಿದರು. ಪ್ರಸ್ತುತ ದೇಶದ ಒಟ್ಟು ರಸಗೊಬ್ಬರ ಸಾಗಣೆಯಲ್ಲಿ ರೈಲ್ವೆ ಇಲಾಖೆಯು ಶೇಕಡಾ ೮೫ ರಷ್ಟು ಸಿಂಹಪಾಲು ಹೊಂದಿದೆ ಎಂದರು.

<><><><>

ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಆಯೋಜಿಸಲಾಗಿರುವ ೧೩ ದಿನಗಳ ಬೈಕ್ ಸಾಹಸ ಯಾತ್ರೆ, ಶೌರ್ಯ ವಿಜಯ್ ಯಾತ್ರೆಗೆ ನವದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದ್ದಾರೆ. ಈ ವೇಳೆ ಮಾತನಾಡಿದ ಅವರು, ಈ ಯಾತ್ರೆ ಯುವಜನರಲ್ಲಿ ದೇಶಭಕ್ತಿಯನ್ನು ಜಾಗೃತಗೊಳಿಸಲಿದೆ. ೧೯೯೯ರ ಕಾರ್ಗಿಲ್ ಯುದ್ಧದ ಗೆಲುವು ದೇಶದ ಅಖಂಡತೆ ಮತ್ತು ಗೌರವದ ಮೇಲಿನ ಯಾವುದೇ ಅಕ್ರಮಣಕ್ಕೆ ಭಾರತ ನೀಡುವ ಪ್ರಬಲ ಉತ್ತರದ ಸಂಕೇತವಾಗಿದೆ ಎಂದರು. 'ಒಂದು ಯಾತ್ರೆ, ಒಂದು ರಾಷ್ಟ್ರ, ಒಂದು ಸಲಾಮು' ಘೋಷ ವಾಕ್ಯದಡಿ ಹೊರಟಿರುವ ೨೮ ಸವಾರರು ತಂಡ ಒಂದು ಸಾವಿರದ ೯೦೦ ಕಿಲೋಮೀಟರ್ ಕ್ರಮಿಸಿ ಇದೇ ೨೬ರಂದು ಲಡಾಖ್‌ನ ಡ್ರಾಸ್‌ನಲ್ಲಿರುವ ಕಾರ್ಗಿಲ್ ಯುದ್ಧ ಸ್ಮಾರಕ ತಲುಪಲಿದೆ.

<><><><>

ಭಾರತ ಮತ್ತು ಯುಕೆ ನಡುವಿನ 'ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ' ನಾಳೆಯಿಂದ ಜಾರಿಗೆ ಬರಲಿದ್ದು, ದ್ವಿಪಕ್ಷೀಯ ವ್ಯಾಪಾರದಲ್ಲಿ ಹೊಸ ಅಧ್ಯಾಯ ಆರಂಭವಾಗಲಿದೆ ಎಂದು ವಾಣಿಜ್ಯ ಕಾರ್ಯದರ್ಶಿ ರಾಜೇಶ್

ಅಗರ್ವಾಲ್ ತಿಳಿಸಿದ್ದಾರೆ. ಇದು ದೇಶದ ವ್ಯಾಪಾರ ಇತಿಹಾಸದ ಪ್ರಮುಖ ಮೈಲಿಗಲ್ಲು ಎಂದು ಅವರು ಬಣ್ಣಿಸಿದ್ದಾರೆ. ನವದೆಹಲಿಯಲ್ಲಿಂದು ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಈ ಒಪ್ಪಂದ ಸುಂಕಗಳನ್ನು ಕಡಿಮೆ ಮಾಡುವುದರ ಜೊತೆಗೆ, ಭಾರತದ ಕೃಷಿ ಮತ್ತು ಡೈರಿ ವಲಯಗಳಿಗೆ ರಕ್ಷಣೆ ಒದಗಿಸಲಿದೆ. ಅಲ್ಲದೆ, ಡಿಜಿಟಲ್ ವ್ಯಾಪಾರ, ಎಂಎಸ್ಎಂಇ ಮತ್ತು ಪರಿಸರ ಕ್ಷೇತ್ರಗಳನ್ನೂ ಇದು ಒಳಗೊಂಡಿದೆ ಎಂದರು. ವಿಶೇಷವಾಗಿ, 'ದ್ವಿಗುಣ ಕೊಡುಗೆ ಸಮಾವೇಶ' ವ್ಯವಸ್ಥೆಯಡಿ ಯುಕೆಗೆ  ತಾತ್ಕಾಲಿಕವಾಗಿ ತೆರಳುವ ಭಾರತೀಯ ವೃತ್ತಿಪರರು ಅಲ್ಲಿ ಸಾಮಾಜಿಕ ಭದ್ರತಾ ವಂತಿಗೆ ಪಾವತಿಸುವುದರಿಂದ ವಿನಾಯಿತಿ ಪಡೆಯಲಿದ್ದಾರೆ. ಈ ಒಪ್ಪಂದದಿಂದ ದೇಶದ ರೈತರು, ಸಣ್ಣ ಉದ್ಯಮಗಳು ಹಾಗೂ ಕಡಲ ಆಹಾರ ರಫ್ತುದಾರರಿಗೆ ಹೊಸ ಜಾಗತಿಕ ಅವಕಾಶಗಳು ಮುಕ್ತವಾಗಲಿವೆ ಎಂದು ಅವರು ತಿಳಿಸಿದ್ದಾರೆ.

<><><><>

ಭಾರತ-ಮಾಲ್ದೀವ್ಸ್ ನಡುವಿನ ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕಾ ಯೋಜನೆಗಳಿಗೆ ಪ್ರಮುಖ ಉತ್ತೇಜನವಾಗಿ ಉಭಯ ರಾಷ್ಟ್ರಗಳ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ಮೊದಲ ಸುತ್ತಿನ ಮಾತುಕತೆಗಳು ಯಶಸ್ವಿಯಾಗಿ ಸಂಪನ್ನಗೊಂಡಿದೆ. ಕಳೆದ ಒಂದು ವಾರದಲ್ಲಿ ವರ್ಚುವಲ್ ಮಾದರಿಯಲ್ಲಿ ಮಾತುಕತೆಗಳು ನಡೆದಿವೆ. ಚರ್ಚೆ ಸಂದರ್ಭದಲ್ಲಿ ಉಭಯ ರಾಷ್ಟ್ರಗಳು ವಿವಿಧ ವ್ಯಾಪಾರ ವಿಷಯಗಳಲ್ಲಿ ಪ್ರಗತಿ ಸಾಧಿಸಿದ್ದು, ಹಲವು ಪ್ರಮುಖ ಅಂಶಗಳ ಕುರಿತು ಒಮ್ಮತಕ್ಕೆ ಬಂದಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

<><><><>

ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಲ್ಹಾದ್ ಜೋಶಿ ನವದೆಹಲಿಯಲ್ಲಿಂದು ದೇಶದ ಆಹಾರ ಧಾನ್ಯ ಸಂಗ್ರಹಣಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಸಚಿವರು ಸಭೆಯಲ್ಲಿ ಉದ್ದೇಶಿತ ಸಂಗ್ರಹಣಾ ನೀತಿ ಮತ್ತು ಖಾಸಗಿ ಉದ್ಯಮಿಗಳ ಖಾತರಿ ಯೋಜನೆಯ ಪ್ರಗತಿಯನ್ನು ಪರಾಮರ್ಶಿಸಲಾಗಿದೆ ಎಂದು ತಿಳಿಸಿದ್ದಾರೆ.

<><><><>

ಹರಿಯಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ವೇಳಾಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಇನ್ನು ೧೦ ದಿನಗಳ ಕಾಲ ವಿಸ್ತರಿಸಿದೆ. ಉಭಯ ರಾಜ್ಯಗಳಲ್ಲಿ ಬೂತ್‌ಮಟ್ಟದ ಅಧಿಕಾರಿಗಳು ಈ ತಿಂಗಳ ೨೪ರವರೆಗೆ ಮನೆ ಮನೆಗೂ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ. ಈ ಹಿಂದೆ ಇವತ್ತಿನವರೆಗೆ ಮಾತ್ರ ಈ ಪ್ರಕ್ರಿಯೆಗೆ ಅವಕಾಶ ನೀಡಲಾಗಿತ್ತು.

<><><><>

ಅಮೆರಿಕದ ಟೆಕ್ಸಾಸ್‌ನ ಡಲ್ಲಾಸ್ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ಮೊದಲನೇ ಸೆಮಿಫೈನಲ್ ಪಂದ್ಯದಲ್ಲಿ ಫ್ರಾನ್ಸ್ ಮತ್ತು ಸ್ಪೇನ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ಮಧ್ಯರಾತ್ರಿ ೧೨.೩೦ಕ್ಕೆ ಆರಂಭವಾಗಲಿದೆ. ಫ್ರಾನ್ಸ್ ತನ್ನ ಸತತ ಮೂರನೇ ಫಿಫಾ ವಿಶ್ವಕಪ್ ಫೈನಲ್‌ಗೇರಲು ಕಣಕ್ಕಿಳಿಯುತ್ತಿದ್ದರೆ, ಸ್ಪೇನ್ ೨೦೧೦ರಲ್ಲಿ ಟ್ರೋಫಿ ಗೆದ್ದ ನಂತರದ ಚೊಚ್ಚಲ ವಿಶ್ವಕಪ್ ಫೈನಲ್‌ಗೇರುವ ವಿಶ್ವಾಸದಲ್ಲಿದೆ.

<><><><>

ಬರ್ಮಿಂಗ್ ಹ್ಯಾಮ್‌ನ ಎಡ್ಜ್‌ಬ್ಯಾಸ್ಟನ್‌ನಲ್ಲಿ ನಡೆಯುತ್ತಿರುವ ಭಾರತ-ಇಂಗ್ಲೆಂಡ್ ನಡುವಿನ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯ ಮೊದಲನೇ ಪಂದ್ಯ ಪ್ರಗತಿಯಲ್ಲಿದೆ. ಟಾಸ್ ಗೆದ್ದು, ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡ ೪೭.೫ ಓವರ್‌ಗಳಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು ೨೫೮ ರನ್ ಗಳಿಸಿ, ಭಾರತಕ್ಕೆ ೨೫೯ ರನ್‌ಗಳ ಗುರಿ ನೀಡಿದೆ. ಭಾರತ ತಂಡವನ್ನು ಶುಭ್ಮನ್ ಗಿಲ್ ಮುನ್ನಡೆಸುತ್ತಿದ್ದು, ಹಿರಿಯ ಅನುಭವಿ ಆಟಗಾರರಾದ

ರೋಹಿತ್ ಶರ್ಮ ಮತ್ತು ವಿರಾಟ್ ಕೊಹ್ಲಿ ಅವರ ಉಪಸ್ಥಿತಿ ತಂಡಕ್ಕೆ ಪ್ರಮುಖ ಉತ್ತೇಜನವಾಗಿದೆ. ಈ ಉಭಯ ಆಟಗಾರರು, ಟಿ-೨೦ ಮತ್ತು ಟೆಸ್ಟ್ ಮಾದರಿಗಳಿಂದ ಈಗಾಗಲೇ ನಿವೃತ್ತಿ ಘೋಷಿಸಿದ್ದು, ಕೇವಲ ಏಕದಿನ ಮಾದರಿ ಪಂದ್ಯಗಳಲ್ಲಿ ಭಾರತದ ಪರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಣಕ್ಕಿಳಿಯುತ್ತಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>